- -

<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,</u>

<u>ನ್ಯಾಯಾಲಯ,ಹೊಸದುರ್ಗ.</u>

ಅಸಲು ದಾವಾ ಸಂಖ್ಯೆ **177/2017** ದಿನಾಂಕಃ **17.11.2025**

ಡಿ.ಡಬ್ಲ್ಯೂಃ **1**

**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿಯ ಪರ ಶ್ರೀ ಸಿ ಬಿ ವಕೀಲರಿಂದ</u>**

1. ನಮ್ಮ ಗ್ರಾಮ ಮುದಿಯಪ್ಪನಹಟ್ಟಿಯಿಂದ ಕಂಚಿಪುರ ಗ್ರಾಮಕ್ಕೆ ಸುಮಾರು 4-5 ಕಿ ಮಿ ಇರುತ್ತದೆ. ನಮ್ಮ ಗ್ರಾಮದವರು ಪ್ರತಿ ಒಂದು ವ್ಯವಹಾರಕ್ಕೂ ಕಂಚಿಪುರ ಗ್ರಾಮಕ್ಕೆ ಹೋಗಿ ಬರಬೇಕಾಗುತ್ತದೆ ಎಂದರೆ ಸರಿ . ವಾದಿ ಗುತ್ತಮ್ಮ ನಮಗೆ ಸಣ್ಣ ವಯಸ್ಸಿನಿಂದಲೂ ಪರಿಚಯ ಇರುತ್ತಾರೆ. ವಾದಿಯ ತಂದೆ ನರಸಿಂಹಯ್ಯರವರನ್ನು ನಾನು ನೋಡಿರುತ್ತೇನೆ. ಸದರಿ ನರಸಿಂಹಯ್ಯ ಈಗ ಜೀವಂತ ಇರುವುದಿಲ್ಲ.

2. ದಾವಾ ಸ್ವತ್ತು ಕಗ್ಗಲಕಟ್ಟೆ ಗ್ರಾಮದ ಸರ್ವೆ ನಂ.42. ದಾವಾ ಸ್ವತ್ತಿನ ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ. ಸದರಿ ಸರ್ವೇ ನಂಬರ್ 42 ರಲ್ಲಿ ಎಷ್ಟು ಪೋಡುಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ 9 ಎಕರೆ 20 ಗುಂಟೆಯ ಒಂದು ಜಮೀನು , 7 ಎಕರೆ 20 ಗುಂಟೆಯ ಇನ್ನೊಂದು ಜಮೀನು ಎಂದು ಸ್ವತಃ ನುಡಿಯುತ್ತಾರೆ. ಸದರಿ 9 ಎಕರೆ 20 ಗುಂಟೆಯ ಒಂದು ಜಮೀನು ಹಾಗೂ 7 ಎಕರೆ 20 ಗುಂಟೆಯ ಜಮೀನು ನನ್ನ ಅಜ್ಜಿ ದೊಡ್ಡಕ್ಕನಿಗೆ ದರಕಾಸ್ತಿನಲ್ಲಿ ಮಂಜೂರಾತಿಯಾಗಿರುತ್ತದೆ ಎಂದರೆ ಸರಿ. ಸದರಿ ಎರಡು ಜಮೀನುಗಳನ್ನು ನನ್ನ ಅಜ್ಜಿಯ ಮಕ್ಕಳಾದ ಮುದ್ದೀರಪ್ಪ ಮತ್ತು ಕುಂಟಪ್ಪ ಹಂಚಿಕೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಮುದ್ದೀರಪ್ಪ ನನ್ನ ತಂದೆ. ನನ್ನ ತಂದೆ ಮುದ್ದೀರಪ್ಪ ಮತ್ತು ಕುಂಟಪ್ಪ ಇಬ್ಬರು ದಿಃ 07.09.1953 ರಂದು ದಾವಾ ಸ್ವತ್ತು 2 ಎಕರೆ 12 ಗುಂಟೆ ಜಮೀನನ್ನು ವಾದಿಯ ತಂದೆ ನರಸಿಂಹಯ್ಯನಿಗೆ ಶುದ್ಧ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು.

ಸದರಿ ಮಾರಾಟ ಮಾಡಿದ ಜಮೀನು ಸರ್ವೇ ನಂ. 42/2 ರಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ಪುಟ್ಟಯ್ಯ , ಪಶ್ಚಿಮಕ್ಕೆ ವೆಂಕಟಪ್ಪ , ಉತ್ತರಕ್ಕೆ ಇದೇ ಸರ್ವೇ ನಂಬರ್ ನ ಉಳಿದ ಜಮೀನು ಮತ್ತು ದಕ್ಷಿಣಕ್ಕೆ ಕೊಟ್ರಯ್ಯ ರವರಿಗೆ ಸೇರಿದ ಜಮೀನು ಇರುತ್ತದೆ ಎಂದರೆ ಸರಿಯಲ್ಲ . ಖರೀದಿ ಆದ ನಂತರ ನರಸಿಂಹಯ್ಯ ಸ್ವಾಧೀನಾನುಭವದಲ್ಲಿ ಇದ್ದು ನಂತರ ವಾದಿ ದಾವಾ ಆಸ್ತಿಯ ಸ್ವಾಧೀನಾನುಭವದಲ್ಲಿಇರುತ್ತಾರೆ ಎಂದರೆ ಸರಿಯಲ್ಲ .

3. ನನಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು , ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ . ವಾದಿ ವಯಸ್ಸಾದ ಮಹಿಳೆಯಾಗಿದ್ದು ಆಕೆಗೆ ಬೆದರಿಸಿ ದಾವಾ ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ವಾದಿ ಈ ದಾವೆಯಲ್ಲಿ ಹಾಜರು ಮಾಡಿರುವ ದಾಖಲೆಗಳನ್ನು ನಾನು ಪರಿಶೀಲಿಸಿ ನೋಡಿರುವುದಿಲ್ಲ. ಸದರಿ ದಾಖಲೆಗಳನ್ನು ಪ್ರಶ್ನಿಸಿ ನಾನಾಗಲೀ , ನನ್ನ ತಂದೆ ಅಥವಾ ಚಿಕ್ಕಪ್ಪನಾದ ಕುಂಟಪ್ಪ ಆಗಲೀ ಯಾವುದೇ ಪ್ರಕರಣ ದಾಖಲಿಸಿರುವುದಿಲ್ಲ.

4. ನಾನು ಇದೇ ನ್ಯಾಯಾಲಯದಲ್ಲಿ ವಾದಿ , ರಮೇಶ, ಬಸವರಾಜು ಮತ್ತು ರಾಮಯ್ಯನ ಮಕ್ಕಳ ವಿರುದ್ಧ ಓ.ಎಸ್.ನಂ. 67/2017 ನ್ನು ದಾಖಲಿಸಿರುತ್ತೇನೆ. ಆ ದಾವೆಯ ಪ್ರತಿವಾದಿಯರು ಸಹ ನನ್ನ ಅಜ್ಜಿ , ತಂದೆ ಮತ್ತು ಚಿಕ್ಕಪ್ಪನಿಂದ ಜಮೀನುಗಳನ್ನು ಶುದ್ಧ ಕ್ರಯಕ್ಕೆ ಪಡೆದು ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ . ಈಗಾಗಲೇ ಮಾರಾಟ ಮಾಡಿರುವ ಕಾರಣ ನನಗೆ ಸರ್ವೇ ನಂ. 42/1 ಮತ್ತು 42/2 ರಲ್ಲಿ ಯಾವುದೇ ರೀತಿಯ ಹಕ್ಕು , ಅಧಿಕಾರ ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ . ವಾದಿ ಮತ್ತು ಓ.ಎಸ್.ನಂ. 67/2017 ರಲ್ಲಿನ ಪ್ರತಿವಾದಿಯರು ಕಾನೂನು ರೀತಿ ಖರೀದಿ ಮಾಡಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಅವರಿಗೆ ತೊಂದರೆಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ . ಸರ್ವೇ ನಂ. 42/1 ಎ ರಲ್ಲಿ 7 ಎಕರೆ 7 ಗುಂಟೆ ಮತ್ತು ಸರ್ವೇ ನಂ. 42/2 ರ ಜಮೀನು ನನಗೆ ಸೇರಿದ್ದು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ . ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು , ಅಧಿಕಾರ , ಸ್ವಾಧೀನ ಇರದಿದ್ದರೂ ದಾವಾ ಸ್ವತ್ತನ್ನುಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,
ನ್ಯಾಯಾಲಯ,ಹೊಸದುರ್ಗ.

ಅಸಲು ದಾವಾ ಸಂಖ್ಯೆ **177/2017** ದಿನಾಂಕಃ **17.11.2025**

ಡಿ.ಡಬ್ಲ್ಯೂಃ **2**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಶ್ರೀ ಸಿ ಬಿ ವಕೀಲರಿಂದ**

1. ನನ್ನ ಊರು ಕಂಚಿಪುರ ಗ್ರಾಮ. ದಾವಾ ಜಮೀನು ಕಂಚಿಪುರ ಗ್ರಾಮದಿಂದ ಸುಮಾರು 1 ರಿಂದ 1.25 ಕಿ ಮಿ ದೂರದಲ್ಲಿ ಇರುತ್ತದೆ. ದಾವಾ ಜಮೀನಿಗೆ ಲಗತ್ತಾಗಿ ದಕ್ಷಿಣ ದಿಕ್ಕಿಗೆ ನನಗೆ ಸೇರಿದ ಜಮೀನು ಇರುತ್ತದೆ . ದಾವಾ ಜಮೀನು ಕಂಚಿಪುರದ ಉತ್ತರ ದಿಕ್ಕಿನಲ್ಲಿ ಇರುತ್ತದೆ . ದಾವಾ ಜಮೀನಿನ ಸರ್ವೆ ನಂ. 42. ಸರ್ವೆ ನಂ. 42 ರಲ್ಲಿ 9 ಎಕರೆಯ ಒಂದು ಜಮೀನು , 7 ಚಿಲ್ಲರೆ ಎಕರೆಯ ಒಂದು ಜಮೀನು ಇದ್ದು ಒಂದಕ್ಕೊಂದು ಲಗತ್ತಾಗಿ ಇರುತ್ತವೆ . ಸದರಿ ಎರಡು ಜಮೀನುಗಳ ಪೂರ್ವಕ್ಕೆ ಬಸಣ್ಣ ರವರ ಜಮೀನು ಇರುತ್ತದೆ. ಪಶ್ಚಿಮ ದಿಕ್ಕಿಗೆ ಕೆ.ಜಿ. ರಾಮಪ್ಪರವರ ಮಕ್ಕಳಾದ ಸಿದ್ದಬಸಪ್ಪ ಮತ್ತು ನಾಗಪ್ಪ ರವರ ಜಮೀನು. ಉತ್ತರ ದಿಕ್ಕಿಗೆ ಗುರಾಬೋವಿ ಜಮೀನು , ದಕ್ಷಿಣಕ್ಕೆ ಕುಂಟ ಸಣ್ಣಪ್ಪನ ಜಮೀನು ಇರುತ್ತದೆ. ಸದರಿ ಜಮೀನಿನ ಪಹಣಿ ಮತ್ತು ಪಟ್ಟ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಸದರಿ 9 ಎಕರೆ ಮತ್ತು 7 ಎಕರೆ ಚಿಲ್ಲರೆ ಜಮೀನು ದೊಡ್ಡಜ್ಜಿ ರವರ ಅಜ್ಜನಿಗೆ ದರಕಾಸ್ತಿನಲ್ಲಿ ಮಂಜೂರಾತಿ ಆಗಿರುತ್ತದೆ.

2. ನಮ್ಮ ಗ್ರಾಮದ ಈಡಿಗರ ನರಸಿಂಹಯ್ಯರವರ ಹೆಸರು ನನಗೆ ಗೊತ್ತು , ಆದರೆ ಅವರನ್ನು ನೋಡಿರುವ ಪರಿಚಯ ನನಗೆ ಇಲ್ಲ . ವಾದಿ ಸದರಿ ನರಸಿಂಹಯ್ಯನ ಮಗಳು ಎಂದರೆ ಸರಿ . ಸದರಿ ನರಸಿಂಹಯ್ಯ ದಾವಾ ಸರ್ವೆ ನಂಬರ್ ನಲ್ಲಿ 2 ಎಕರೆ 12 ಗುಂಟೆಯ ಮಾಲೀಕರಾಗಿ ಅನುಭವಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನನ್ನು ದೊಡ್ಡಕ್ಕನ ಮಕ್ಕಳು

ನರಸಿಂಹಯ್ಯನಿಗೆ 1953 ರಲ್ಲಿ ಶುದ್ದ ಕ್ರಯಕ್ಕೆ ಖರೀದಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ದೊಡ್ಡಕ್ಕ ಈಗ ಮರಣ ಹೊಂದಿರುತ್ತಾರೆ. ಸದರಿ ದೊಡ್ಡಕ್ಕ 40 ವರ್ಷಗಳಿಂದ ಈಚೆಗೆ ಮರಣ ಹೊಂದಿರುತ್ತಾರೆ. ಆಗ ನನಗೆ ಸುಮಾರು 20 ವರ್ಷಕ್ಕಿಂತಲೂ ಹೆಚ್ಚಿನ ವಯಸ್ಸು ಆಗಿತ್ತು. ಮನೆಯ ವ್ಯವಹಾರಗಳನ್ನು ದೊಡ್ಡಕ್ಕ ರವರೇ ನೋಡಿಕೊಳ್ಳುತ್ತಿದ್ದರು.

3. ನಾನು ಮತ್ತು 4 ನೇ ಪ್ರತಿವಾದಿ ವಿಶ್ವಾಸದಿಂದ ಇರುತ್ತೇವೆ . ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿನ ವಿಚಾರಗಳನ್ನು ನಾನು ಹೇಳಿ ಬರೆಸಿರುವುದಿಲ್ಲ. ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು 4 ನೇ ಪ್ರತಿವಾದಿ ಹೇಳಿಕೊಟ್ಟಂತೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ದೊಡ್ಡಕ್ಕ ಜೀವಿತ ಕಾಲದಲ್ಲಿ 1970 ರ ವರೆಗೂ ಯಾವುದೇ ವಿಭಾಗ ಮಾಡಿರುವುದಿಲ್ಲ ಎಂದು ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ . ಪ್ರತಿವಾದಿಯರು ದಾವಾ ಸ್ವತ್ತಿನಲ್ಲಿ ಯಾವುದೇ ಜಮೀನು ಮಾರಾಟ ಮಾಡಿರುವುದಿಲ್ಲ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ . ನಾನು ಜನಿಸುವ ಮೊದಲೇ ನರಸಿಂಹಯ್ಯ ದಾವಾ ಸ್ವತ್ತನ್ನು ಖರೀದಿ ಸ್ವಾಧೀನಾನುಭವದಲ್ಲಿ ಇದ್ದು ನಂತರ ವಾದಿ ಸ್ವಾಧೀನಾನುಭವದಲ್ಲಿ ಇರುವ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.